INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -4, July-August, 2025
PageNo,-101-106
Peer -Reviewed, Refereed Journal

# ಭಜನೆಯ ಉಗಮ ಮತ್ತು ವಿಕಾಸ

*.ಹನುಮಂತಪ್ಪ ಬಿ.ಕೆ.[1]
**.ಪ್ರೊ.ವಿಜಯಕುಮಾರಿ ಎಸ್.ಕರಿಕಲ್.[2]

ಭಜನೆ ಪರಂಪರೆಯು ನಮ್ಮ ದೇಶದ ಎಲ್ಲಾ ಭಾಗಗಳಲ್ಲಿಯೂ ಕಂಡುಬರುತ್ತದೆ ಮತ್ತು ಪ್ರಾದೇಶಿಕವಾಗಿ ದೇವತಾ ಆರಾಧನಾ ದೃಷ್ಟಿಯ ಮೂಲಕ ಭಜನೆಯ ಪ್ರಭಾವ ಹಳ್ಳಿ, ನಗರ, ಪಟ್ಟಣ ಸೇರಿದಂತೆ ವಿಸ್ತಾರವನ್ನು ಪಡೆದುಕೊಂಡಿದೆ. ಈ ಬಗೆಯ ಪರಂಪರೆ ಮತ್ತು ಸಂಪ್ರದಾಯ ಇವು ಸಂದರ್ಭನುಸಾರವಾಗಿ ನಡೆಯುತ್ತವೆ. ಕರ್ನಾಟಕ, ಉತ್ತರ ಕರ್ನಾಟಕದ ಮೊದಲಾದ ಕಡೆಗಳಲ್ಲಿ ಎಲ್ಲಾ ಧರ್ಮದವರು, ಮತ ಪಂಥದವರು, ಕೆಳಸ್ತರ ಸಮುದಾಯದಿಂದ ಮೇಲುಸ್ಥರದವರೆಗೂ ಈ ಕಲೆಯನ್ನು ಕರಗತ ಮಾಡಿಕೊಂಡು ಹಾಡುವ ಪರಿಪಾಠವಿದೆ. ಈ ಭಜನೆ ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ.

ದೈವದ ಆರಾಧನೆಗಾಗಿ ಭಜನೆ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿ ಕಂಡುಬರುತ್ತದೆ. ಭಜನೆ ದೇವರಿಗೆ ಸಲ್ಲಿಸುವ ಭಕ್ತಿಯ ಕಾಣಿಕೆ. ಈ ಕಾಣಿಕೆಯ ರೂಪದಲ್ಲಿ ಭಕ್ತಿಯಿಂದ ಭಜನೆ ಮಾಡುತ್ತ ತಮಗಾದ ನೋವು, ನಲಿವುಗಳನ್ನು ಮರೆಯುವ ರೂಢಿ ಇದಾಗಿದೆ. ಇದಕ್ಕೆ ಅದರದೇ ಆದ ಸ್ಥಾನಮಾನವೂ ಇದೆ. ದೇವರನ್ನು ಆರಾಧಿಸುವುದು, ಪೂಜಿಸುವುದು ಭಕ್ತಿಯ ಪರಂಪರೆಯಿಂದ ಸೇವೆ ಸಲ್ಲಿಸುವ ಬಹುದೊಡ್ಡ ಪರಂಪರೆಯು ಇದಕ್ಕಿದೆ. ಅಲ್ಲಲ್ಲಿ ಹಾಡುಗಳಲ್ಲಿ ಒಬ್ಬರನ್ನು ಹೊಗಳುವುದು, ಗೌರವಿಸುವುದು, ನೀತಿಯನ್ನು ಬೋಧಿಸುವುದು ಹಾಗೂ ಸಂದೇಶ ಮಾಡುವುದರ ಜೊತೆಗೆ ಮಾನವನ ನಡತೆಯನ್ನು ಬದಲಾಯಿಸುವ ಉದ್ದೇಶವು ಹೊಂದಿರುತ್ತದೆ.

ಭಜನೆ ಎಂದರೆ ದೇವರನ್ನು ಕುರಿತು ಒಂಟಿಯಾಗಿ ಅಥವಾ ಗುಂಪಿನಲ್ಲಿ ಭಕ್ತಿಯಿಂದ ಸ್ತುತಿಸುವ ಒಂದು ವಿಧಾನಕ್ಕೆ ಭಜನೆ ಎನ್ನುತ್ತಾರೆ. ಭಜನೆ ದೇವರಿಗೆ ಸಲ್ಲಿಸುವ ಒಂದು ಬಗೆಯ ಹರಕೆ, ಸೇವೆ ಎಂದು ಕರೆಯಲಾಗಿದೆ. ಭಜನೆ ಶಬ್ದದ ಅರ್ಥದ ಬಗ್ಗೆ ವಿವಿಧ ಶಬ್ದಕೋಶಗಳಲ್ಲಿ ಬೇರೆ ಬೇರೆ ಅರ್ಥಗಳು ಸಿಗುತ್ತವೆ. ಸಿರಿಗನ್ನಡ ಅರ್ಥಕೋಶದಲ್ಲಿ 'ಭಜ್' ಎಂದರೆ ಸೇವೆಮಾಡು, ಬೇಯಿಸು, ಪೂಜೆ ಮಾಡು

---

[1]. ಸಂಶೋಧನಾ ವಿದ್ಯಾರ್ಥಿ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

[2] .ಪ್ರಾಧ್ಯಾಪಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಎಂಬ ಅರ್ಥ ಇದೆ. ಅಲ್ಲದೆ 'ಭಜಕ' ಎಂದರೆ ಪೂಜಿಸುವವ, ಹೊಗಳುವವ, ಸ್ತುತಿ ಮಾಡುವವ ಎಂದು ವಿವರ ಸಿಗುತ್ತದೆ.

ಕಿಟಲ್ ಶಬ್ದಕೋಶದಲ್ಲಿ ಭಜನೆ ಇದಕ್ಕೆ ಪ್ರಥಮಾರ್ಥ 'worship; devotion the act of waithing or attending upon repeating the nameramas of a god as an act of worship' ಎನ್ನುವಲ್ಲಿ ಭಕ್ತನ ಭಕ್ತಿ ಪೂರ್ವಕವಾಗಿ ದೈವವನ್ನು ಆರಾಧಿಸುವದೆಂಬ ಅರ್ಥವಿದೆ.

ಕನ್ನಡ–ಇಂಗ್ಲಿಷ್–ಕನ್ನಡ ಶಬ್ದಕೋಶದಲ್ಲಿ ಭಜನೆ ಎಂದರೆ (SN) Adarotion worship devotion singing the preasises of good' ಎಂಬ ಅರ್ಥವಿದೆ.

"ಭಜನೆ ಹಾಗೂ ಬಯಲಾಟ ಎರಡರ ಸಂಗಮವು ಆಗಿರುವ ಒಂದು ವಿಶಿಷ್ಟವಾದ ಜನಪದ ಕಲೆ. ಇದು ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ. ಈ ಕಲೆ ಮರಾಠಿಗರಲ್ಲೇ ಹೆಚ್ಚು ಪ್ರಚಲಿತವಿರುವುದರಿಂದ ಇದು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದಿತೆಂದು ಜನಪದ ವಿಶ್ವಕೋಶದಲ್ಲಿ ಚಂದ್ರಶೇಖರ ಕಂಬಾರರು ಹೇಳಿದ್ದಾರೆ. (ಪು.447 ಸಂ.7)

"ಒಟ್ಟಾರೆಯಾಗಿ ನೋಡುವುದಾದರೆ 'ಭಜ್' ಎಂಬ ಸಂಸ್ಕೃತ ಧಾತುವಿನಿಂದ 'ಭಜನೆ' ಎಂಬ ಪದ ಹುಟ್ಟಿದ್ದು ಎಲ್ಲಾ ಭಾಷೆ ಕೋಶಗಳಲ್ಲೂ ಮತ್ತು ಬಳಕೆಯಲ್ಲಿ ಭಜನೆ ಪದಕ್ಕೆ ಇರುವ ಸಾಮಾನ್ಯ ಅರ್ಥ ಒಂದೇ ಆಗಿದೆ. ಭಜನೆ ಕನ್ನಡ, ಮರಾಠಿ ಭಜನ್, ಹಿಂದಿ ಎಲ್ಲಾ ಅರ್ಥಗಳು ದೇವರನ್ನು ಸ್ತುತಿಸು, ಪೂಜಿಸು, ಆರಾಧಿಸು, ಪ್ರಾರ್ಥಿಸು ಎಂಬ ಅರ್ಥವೇ ಆಗಿದೆ. ನಾದದ ಮುಖಾಂತರ ದೇವರನ್ನು ಸಂತುಷ್ಟಗೊಳಿಸುವುದು. ಆದ್ದರಿಂದ ಅನಿಷ್ಟಗಳನ್ನು ದೂರ ಮಾಡಿಕೊಳ್ಳುವುದು ಎನ್ನುವುದು ಭಜನೆ". ಹೀಗೆ ವಿವಿಧ ಅರ್ಥಗಳ ಮೂಲಕ ಭಜನೆ ಅರ್ಥವನ್ನು ಗುರುತಿಸಲಾಗಿದೆ. ಈ ಭಜನೆ ಪದದ ಮೌಕಿಕ ಅರ್ಥ ತುಂಬಾ ವಿಶಿಷ್ಟವಾಗಿದೆ. ಇದಕ್ಕೆ ಭಜನೆ ಕಲಾವಿದರು ಕೊಡುವ ಅರ್ಥ ಬಹಳ ಮಾರ್ಮಿಕವಾದದ್ದು. 'ಭಜನಿ' ಮತ್ತು 'ಭಜನಾ' ಶಬ್ದಗಳ ಹಿನ್ನೆಲೆಯಲ್ಲಿ ಭಜನೆ ಎಂಬ ಶಬ್ದದಲ್ಲಿಯ 'ನೀ' ಅಕ್ಷರವನ್ನು ಪ್ರತ್ಯೇಕಿಸುತ್ತಾರೆ. ನೀ ಎನ್ನುವಲ್ಲಿ ಎಲ್ಲವೂ ಅವನೇ ಅಂದರೆ ಪರಮಾತ್ಮ(ಶಿವ) ಎಂಬ ಸರ್ವಾರ್ಪಣ ಭಾವವನ್ನು ಕಾಣುತ್ತೇವೆ. ಇನ್ನು ಭಜನಾ ಎನ್ನುವಲ್ಲಿ 'ನಾ' ಎಂಬುದು 'ಅಹಂ' ಅಂದರೆ ಪರಮಾತ್ಮನನ್ನು ಪರಿಗಣಿಸದ ಗರ್ವವನ್ನು ಹೇಳುತ್ತದೆ. ಆದ್ದರಿಂದಲೇ ಉತ್ತರ ಕರ್ನಾಟಕದ ಕಲಾವಿದರು ಯಾವಾಗಲೂ 'ಭಜನೀ' ಎನ್ನುವುದೇ ಹೆಚ್ಚು. ಈ ಪದಕ್ಕೆ ಭಾವನಾತ್ಮಕವಾಗಿ ಮತ್ತು ಮಾನಸಿಕವಾಗಿ ತಮ್ಮನ್ನು ಅವರು ಒಪ್ಪಿಕೊಂಡು ಬಿಟ್ಟಿರುತ್ತಾರೆ.

ಒಟ್ಟಿನಲ್ಲಿ ಭಕ್ತನೊಬ್ಬ ಧನ್ಯತೆಯಿಂದ ಶಿವ ಅಥವಾ ಪರಮಾತ್ಮನನ್ನು ಕುರಿತು ಪ್ರಾರ್ಥಿಸಿ, ವರ್ಣಿಸಿ, ಸ್ತುತಿಸಿ, ಭಜಿಸುವಂತಹ ಹಾಡುಗಳೇ ಭಕ್ತಿಗೀತೆಗಳು. ಅವುಗಳನ್ನು ಭಜನೆ ಹಾಡುಗಳೆಂದು ಕರೆಯುವರು. ಹಾಗೂ ಇದರಲ್ಲಿ ರಾಗ–ತಾಳ–ವಾದ್ಯಗಳು ಸಮಾವೇಶಗೊಂಡಾಗ ಭಜನೆ ಎಂದು ಕರೆಯುವರು.

ಮೌಖಿಕ ಸಾಹಿತ್ಯದ ಸೊಲ್ಲನ್ನು ಗುರುತಿಸುವುದರೊಂದಿಗೆ ಇವುಗಳ ಹೆಸರುಗಳನ್ನು ಗುರುತಿಸಬಹುದು. ಎಲ್ಲಾ ಹಾಡುಗಳಂತೆ ಭಜನೆ ಹಾಡುಗಳಿಗೂ ಹಿಮ್ಮೇಳ–ಮುಮ್ಮೇಳ ಗಾಯಕರಿರುತ್ತಾರೆ. ಪ್ರಾರಂಭದಲ್ಲಿ ಸ್ವರ ಸಂಯೋಜನೆಯ ಸಲುವಾಗಿ ಏಕತಾರಿಕಾಯಿಯ ವಾದ್ಯವನ್ನು ಬಳಸುತ್ತಿದ್ದರು. ಅದಕ್ಕೆ ಒಂದು ಲಯ ಇರುವುದು ತದನಂತರದ ದಿನಗಳಲ್ಲಿ ಹಾರ್ಮೋನಿಯಂ ವಾದ್ಯ ಪ್ರಾರಂಭವಾದ ನಂತರ ದಮ್ಮಡಿ, ತಾಳ, ವಾದ್ಯಗಳು ಆಧುನಿಕವಾಗಿ ಹೊಸ ಹೊಸ ವಾದ್ಯಗಳು ಅಳವಡಿಸಿಕೊಂಡಿದ್ದಾರೆ. ಮತ್ತೊಂದು ವಿಶಿಷ್ಟ ಬಗೆಯಲ್ಲಿ ರಾಗಲಪನೆ ಮಾಡುತ್ತಾ ಈ ಸಂಗೀತದ ಜೊತೆಗೆ ಹೊಸ ಹೊಸ ರಾಗಗಳನ್ನು ಮಾಡುತ್ತ ಭಜನೆ ಪ್ರಾರಂಭಿಸುವರು. ಭಜನೆ ಹಾಡುಗಳಲ್ಲಿಯೂ ಸಹ ಗೀಗಿ ಪದಗಳಂತೆ ಸವಾಲ್–ಜವಾಬ್ ಪದಗಳು ಕಂಡುಬರುತ್ತವೆ.

ಜನಸಾಮಾನ್ಯರ ಹಾಡುಗಳಲ್ಲಿ ಬರುವಂತ ಸಂವಾದದ ರೂಪದ ಹಾಡುಗಳನ್ನು ಕಾಣಬಹುದು. ಇಲ್ಲಿ ಇನ್ನೊಂದು ವಿಶೇಷವೆಂದರೆ ತೊಟ್ಟಿಲು ತೂಗುವಾಗ ಹಾಡುವ ಹಾಡಿನ ಹಿಂದೆ ಜೋ ಜೋ ಎನ್ನುವುದು, ಸೊಬಾನದ ಹಾಡು ಹಾಡುವವರ ಹಿಂದೆ ಸೋ ಎನ್ನುವುದು, ಕೋಲಾಟದ ಹಾಡುವಾಗ ಕೋಲ ಕೋಲು ಎನ್ನುವುದು. ಇಂತಹ ಎಲ್ಲ ಬಗೆಯ ಹಾಡುಗಳನ್ನು ಜ್ಞಾಪಿಸಿಕೊಂಡರೆ ಭಜನೆಯಲ್ಲಿಯ ಸಾಮ್ಯತೆ ತಿಳಿಯಬಹುದು. ಜೋ ಜೋ ಎಂದರೆ ಜೋಗುಳದ ಹಾಡು, ಸುವ್ವಿ ಸುವ್ವಿ ಎಂದರೆ ಕಟ್ಟುವ ಹಾಡು, ಸೋ ಎಂದರೆ ಸೋಬಾನೆ ಹಾಡು, ಕೋಲು ಕೋಲು ಎಂದರೆ ಕೋಲಾಟದ ಹಾಡುಗಳಾದಂತೆ, ಭಜನೆ ಹಾಡು ಕೂಡ ಶಿವನ ನಾಮಸ್ಮರಣೆ, ಭಗವಂತನ ಧ್ಯಾನವನ್ನು ಭಜಿಸುವುದರಿಂದ ಭಜನೆ ಎಂದು ಗುರುತಿಸಿದ್ದಾರೆ. ಹೀಗೆ ಶಿವನನ್ನು ಪರಮಾತ್ಮನನ್ನು ಭಜಿಸಿ ಧ್ಯಾನಿಸಿದ ಹಾಡುಗಳು ಭಜನೆ ಹಾಡುಗಳಾಗಿವೆ ಎಂಬ ಮಾತು ಗಮನಾರ್ಹವಾಗಿದೆ.

**ಭಜನೆಯ ಸ್ವರೂಪ ಮತ್ತು ಲಕ್ಷಣ :**

ನಿಧಾನಗತಿಯಲ್ಲಿ ಆರಂಭವಾಗಿ ಆಮೇಲೆ ತ್ವರಿತಗತಿಯಲ್ಲಿ ಮುಕ್ತಾಯವಾಗುವುದು ಭಜನೆಗಳ ಸಾಮಾನ್ಯ ಲಕ್ಷಣ. ಗ್ರಾಮೀಣ ಭಾಗದಲ್ಲಿ ಗಂಡಸರು ಹೆಂಗಸರು ಮಕ್ಕಳಾದಿಯಾಗಿ ಭಜನೆಯನ್ನು ಮಾಡುತ್ತಾರೆ. ಇವರು ಭಾವುಕ ಭಕ್ತಿ, ದೈವೀ ಶ್ರದ್ಧೆ–ನಿಷ್ಠೆಗಳಿಂದ ಭಜನೆಯಲ್ಲಿ ತೊಡಗಿರುತ್ತಾರೆ. ಭಜನೆ ಹಾಡುಗಳು ಸಾಹಿತ್ಯ ಸಂಗೀತ ಎರಡನ್ನೂ ಅಳವಡಿಸಿಕೊಂಡಿರುತ್ತವೆ. ಇವೆರಡೂ ಪರಸ್ಪರ ಪೂರಕವಾಗಿರುತ್ತವೆ. ಸಾಮಾನ್ಯವಾಗಿ ಹಾಡು ರಚಿಸಿದ ಕವಿ ಸ್ವತಃ ರಾಗ ಸಂಯೋಜಿಸಿ ಹಾಡುತ್ತಾನೆ.

ಭಜನೆಗಳಲ್ಲಿ ಗಾಯನ ವಾದನ ಕಲೆಯ ಸಂಗಮವನ್ನು ಕಾಣುತ್ತೇವೆ. ಸಮ್ಯಕ್ ಗೇಯತಿ ಸಂಗೀತಂ" ಎಂಬಂತೆ ಭಜನೆ ಹಾಡುಗಳು ಸಂಗೀತ ಎನಿಸಿವೆ.

ಇವು ದ್ವಿಪದಿ, ತ್ರಿಪದಿ, ಚೌಪದಿಗಳುಳ್ಳವಿದ್ದು ಆಡುನುಡಿಯನ್ನು ಹೊಂದಿರುತ್ತವೆ. ಕೆಲವು ಹಾಡುಗಳು ಜಾನಪದ ಭಾಷೆಯಲ್ಲಿಯೂ ರಚನೆಗೊಂಡಿರುವುದುಂಟು. ಕನಿಷ್ಠ ಒಂದು ನುಡಿಯಿಂದ ಅನೇಕ ನುಡಿಗಳವರೆಗೆ ಭಜನೆ ಹಾಡು ರಚನೆಗೊಂಡಿರುವುದುಂಟು. ಈ ಹಾಡು ಸಾಮಾನ್ಯವಾಗಿ ಸಂಕ್ಷಿಪ್ತವಾಗಿರುವುದೂ ಉಂಟು ಇವುಗಳಿಗೆ ರಾಗ–ತಾಳಗಳ ನಿರ್ದೇಶನವಿರುತ್ತದೆ; ಪಲ್ಲವಿ–ಅನುಪಲ್ಲವಿಗಳಿಂದ ಕೂಡಿರುತ್ತವೆ. ಭಜನೆ ಹಾಡುಗಳಲ್ಲಿ ಲಯ ಮಾಧುರ್ಯವಿರುತ್ತದೆ.

ಇವು ಕವಿಯ ಆರಾಧ್ಯ ದೈವ, ಗುರು, ಊರ ಹೆಸರು, ಹಾಗೂ ತನ್ನ ಹೆಸರಿನಿಂದ ಅಂತ್ಯಗೊಳ್ಳುವುದುಂಟು ಸಾಮಾನ್ಯ ಸ್ಥಳೀಯ ದೃಷ್ಟಾಂತ, ಉಪಮೇಯಗಳ ಬಳಕೆ ಕೂಡ ಕಂಡುಬರುತ್ತದೆ. ಇವುಗಳನ್ನು ಬರೆದವರು ಸಾಮಾನ್ಯವಾಗಿ ಗ್ರಾಮೀಣ ಅನುಭಾವಿ ಕವಿಗಳಾಗಿದ್ದು, ಅಷ್ಟು ಓದಿದವರಲ್ಲವಾದರೂ, ಶಾಸ್ತ್ರಪುರಾಣ ಬಲ್ಲವರಾದುದರಿಂದ ಸಂಸ್ಕೃತ ಪದಗಳನ್ನು ಹೇರಳವಾಗಿ ಬಳಸಿರುವುದುಂಟು.

**ಭಜನೆಯ ಪ್ರಕಾರಗಳು :**

ಭಜನೆಯನ್ನು ಕಾಲಕ್ಕೆ ತಕ್ಕಂತೆ, ಸಂದರ್ಭಕ್ಕೆ ತಕ್ಕಂತೆ, ವಿವಿಧ ರೀತಿಯಲ್ಲಿ ವಿಂಗಡಿಸುತ್ತಾರೆ. ಅಂತಹವುಗಳಲ್ಲಿ

1. ವ್ಯಕ್ತಿಗತ ಭಜನೆ
2. ಸಾಮೂಹಿಕ ಭಜನೆ

ಎಂದು ಎರಡು ರೀತಿಯಲ್ಲಿ ವಿಭಜಿಸಬಹುದು.

**1) ವ್ಯಕ್ತಿಗತ ಭಜನೆ :**

ವ್ಯಕ್ತಿಗತ ಭಜನೆಯ ಸ್ಪಷ್ಟ ರೂಪಗಳನ್ನು ಏಕತಾರಿ ಪದಗಳಲ್ಲಿ ಕಾಣುತ್ತೇವೆ. ಏಕತಾರಿ ನುಡಿಸುತ್ತಾ ತಾನೊಬ್ಬನೇ ಭಜನೆ ಹಾಡುವುದು ಅಲ್ಲಿಯ ಕ್ರಮ.

**2) ಸಾಮೂಹಿಕ ಭಜನೆ :**

ಸಾಮೂಹಿಕ ಭಜನೆ ಮೇಳ ರೂಪದ್ದು, ಇಲ್ಲಿಯ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳದೆ ಒಂದಕ್ಕಿಂತ ಹೆಚ್ಚು ಎನ್ನುವುದೇ ಸೂಕ್ತ, ತಾಳ, ತಪ್ಪಡಿ, ಏಕತಾರಿ, ಚಾಜು, ಶೃತಿ, ಮೊದಲಾದ ವಾದ್ಯ ವಿಶೇಷಗಳು ಇಲ್ಲಿರುತ್ತವೆ. ಸಾಮೂಹಿಕ ಭಜನೆಯಲ್ಲಿ ಹಿಮ್ಮೇಳವಿರುತ್ತದೆ ಮುಖ್ಯ ಗಾಯಕ ಭಜನೆಯನ್ನು ಹಾಡುತ್ತಾ ಹೋದಂತೆ ಉಳಿದವರು ಅದೇ ದಾಟಿಯಲ್ಲಿ ಅದನ್ನು ಪುನರಾವರ್ತಿಸುತ್ತಾರೆ. ಕೆಲವೊಮ್ಮೆ ಪಲ್ಲವಿಯ ಭಾಗವನ್ನು ಪುನರಾವರ್ತಿಸಿದರೆ, ಇನ್ನೂ ಕೆಲವೊಮ್ಮೆ ಜೊತೆಯಲ್ಲಿ ಇಡೀ ಹಾಡನ್ನು

ಪುನರಾವರ್ತಿಸುವುದು ಕಂಡುಬರುತ್ತದೆ. ಹಳ್ಳಿಗರು ವರುಷದ ನಾನಾ ಸಂದರ್ಭಗಳಲ್ಲಿ ಭಜನೆಯನ್ನು, ಭಜನೆ ಸಮಾರಂಭವನ್ನು ಏರ್ಪಡಿಸುತ್ತ ಬಂದಿದ್ದಾರೆ. ಸಪ್ತಾಹ ಭಜನೆ. ಶ್ರಾವಣ ಭಜನೆ (ತಿಂಗಳ ಭಜನೆ), ಶಿವರಾತ್ರಿ ಭಜನೆ, ಮಹಾನವಮಿ ಭಜನೆ (ದಸರಾ ಭಜನೆ/ಶಕ್ತಿ ಭಜನೆ) ಹಾಗೂ ಹಬ್ಬ ಹರಿದಿನ ಜಾತ್ರೋತ್ಸವ ಭಜನೆ, ಇತರ ಸಂದರ್ಭದ ಭಜನೆ, ದಿಂಡಿ ಭಜನೆ, ಪಟ ಭಜನೆಗಳನ್ನು ಮಾಡುತ್ತಾರೆ. ಇವೆಲ್ಲಾ ವಿಶಿಷ್ಟ ಸಾಂಸ್ಕೃತಿಕ ಸಂದರ್ಭಗಳಲ್ಲಿಯ ವಿಶೇಷ ಭಜನೆಗಳು.

ಊದುತ್ತಾ, ಬಾರಿಸುತ್ತಾ ಗೌರವದಿಂದ ಕರೆದುಕೊಂಡು ಹೋಗುವ ಪದ್ಧತಿಯೂ, ಹಿಂದೆ ಉತ್ತರ ಕರ್ನಾಟಕದಲ್ಲಿ ಇತ್ತೆಂದು ಭಜನೆ ಕಲಾವಿದರು ಹೇಳುತ್ತಾರೆ. ಇದು ಇಂದು ಇಲ್ಲವಾಗಿದೆ: ಕಾಯಿ ಕೊಡುವ ಪದ್ಧತಿಯೂ ಮಾಯವಾಗಿದೆ. ಉದರ ಪೋಷಣೆ ಮುಖ್ಯವಾಗಿರುವುದರಿಂದ ಹಣಕೊಟ್ಟರೆ ಸಾಕು. ಅದೇ ದೊಡ್ಡ ಆಮಂತ್ರಣ ವೆಂದು ಭಜನೆ ಮಾಡಿ ಬರುತ್ತಾರೆ. ಭಜನೆಯಲ್ಲಿ ಕಟ್ಟುನಿಟ್ಟಾದ ಪಾರಂಪರಿಕ ಸಂಪ್ರದಾಯಚರಣೆಗಳನ್ನು ನಾವಿಂದು ಕಾಣಲಾರವು. ಅಂದು ಭಜನೆ ಕಲಾವಿದರಿಗೆ ಸಂಭಾವನೆ ನಿಗದಿತವಿರಲಿಲ್ಲ: ದೈವದವರು ಮುಟ್ಟಿಗೆಯಲ್ಲಿ ಕೊಟ್ಟಿದ್ದನ್ನು "ಶಿವಾಯ ನಮಃ" ಎಂದು ಸ್ವೀಕರಿಸಿ ದೇವರ ಸೇವೆಗೈದಿದ್ದೇವೆ ಎಂಬ ಧನ್ಯತಾಭಾವದಿಂದ ಹಿಂದಿರುಗುತ್ತಿದ್ದರು. ಇತ್ತೀಚೆಗೆ ಭಜನಾತಂಡದವರು ಸಂಭಾವನೆ ನಿಗದಿಯಾದ ಮೇಲೆಯೇ "ಸಂಚಕಾರ" ಪಡೆದುಕೊಂಡೆ ಹೋಗುತ್ತಾರೆ.

ಬಹಳಷ್ಟು ಕಡೆ ಭಜನೆ ಧಾರ್ಮಿಕ ಕ್ರಿಯೆಯಾಗಿ ಉಳಿದಿಲ್ಲ ಅದು ವ್ಯವಹಾರವಾಗಿದೆ. ವಿಜಾಪುರ, ಬಾಗಲಕೋಟೆ, ಚಿತ್ರದುರ್ಗ, ದಾವಣಗೆರೆ, ತುಮಕೂರು ಹೀಗೆ ವಿವಿಧ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಭಾವನೆ ಪಡೆದುಕೊಂಡ ಮೇಲೆಯೇ ಭಜನಾ ಕಾರ್ಯಕ್ಕೆ ಮುಂದಿಡುತ್ತಾರೆ. ಬೆಳಗಾವಿ ಭಾಗದಲ್ಲಿ, ಇತ್ತ ಹಳೆ ಮೈಸೂರು ರಾಜ ಭಾಗದಲ್ಲಿಯೂ ಸಂಭಾವನೆ ಇದೆ. ವ್ಯಕ್ತಿ, ಸಮಯ, ಸಮಾರಂಭಗಳ ಹಿನ್ನೆಲೆಯಲ್ಲಿ ಸಂಭಾವನೆ ನಿಗದಿಯಾಗಿದೆ. ಆದರೆ ಕೆಲವೊಂದು ಭಜನಾ ಮಂಡಳಿಗಳು ಮಾತ್ರ ಯಾವುದೇ ಭಜನಾ ಕಾರ್ಯಕ್ರಮಕ್ಕೆ ನಿರ್ದಿಷ್ಟ ಸಂಭಾವನೆ ಬಯಸುವುದಿಲ್ಲ. ಅವುಗಳು ತಮ್ಮ ಸಂಪ್ರದಾಯವನ್ನುಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಎಂಬುದು ಸ್ಪಷ್ಟ ಸಂಗತಿಯಾಗಿದೆ.

## ಪರಾಮರ್ಶನ ಗ್ರಂಥಗಳು


1. ಹಿ.ಚಿ.ಬೋರಲಿಂಗಯ್ಯ: ಕರ್ನಾಟಕ ಜಾನಪದ ಕಲೆಗಳ ಕೋಶ.
2. ಚನ್ನಬಸಪ್ಪ ಗೊರೂ: ಕರ್ನಾಟಕ ಜನಪದ ಕಲೆಗಳು.
3. ದೇವೇಂದ್ರಕುಮಾರ ಹಕಾರಿ: ಜಾನಪದ ಸಮ್ಮುಖ.
4. ಡಾ. ವಿಜಯಕುಮಾರಿ ಎಸ್. ಕರಿಕಲ್: 'ಮಹಿಳೆ ಮತ್ತು ಸಮಾಜ'.
5. ಡಾ. ವಿಜಯಮ್ಮ.ವಿ (ಸಂ): 'ಸಂಸ್ಕೃತಿ ಸೌರಭ'.
6. ಡಾ. ವಿಜಯಕುಮಾರಿ ಎಸ್. ಕರಿಕಲ್: 'ವಚನ ಸಾಹಿತ್ಯದಲ್ಲಿ ವೈಶಿಷ್ಟ್ಯತೆ'.
7. ಡಾ. ವಿಜಯಕುಮಾರಿ ಎಸ್. ಕರಿಕಲ್ ಮತ್ತು ಡಾ. ಲೋಲಾಕ್ಷಿ ಎನ್.ಕೆ.: 'ಕನ್ನಡ ಸಾಹಿತ್ಯ ಮಹಿಳಾ ಸಂಕಥನ'.
8. ಎಂ.ಎಂ. ಕಲಬುರ್ಗಿ: ಉತ್ತರ ಕರ್ನಾಟಕದ ಪದ್ಯ ಸಾಹಿತ್ಯ.
9. ಹಲಸಂಗಿ ಗೆಳೆಯರು ಚನ್ನಮಲ್ಲಪ್ಪ: ಗರತಿಯ ಹಾಡು.
10. ಎಲ್.ಬಸವರಾಜು, ಶಿವದಾಸ ಗೀತಾಂಜಲಿ.
11. ವೀರೇಶ ಬಡಿಗೇರ: ಉತ್ತರ ಕರ್ನಾಟಕದ ಗೀತಮೇಳಗಳು.
12. ಎಲ್.ಎಸ್.ಶೇಷಗಿರಿರಾವ್: ಭಾರತೀಯ ಸಾಹಿತ್ಯ ಸಮೀಕ್ಷೆ.
13. ಮೃತ್ಯುಂಜಯ ಹೊರಕೇರಿ: ಜಾಗತೀಕರಣ ಹಾಗೂ ಇತರ ಲೇಖನಗಳು.
14. ಎಲ್.ಬಸವರಾಜು: ಶಿವದಾಸ ಗೀತಾಂಜಲಿ.
15. ಭೀಮಣ್ಣ ನಾಯಕ: ಚಿತ್ರದುರ್ಗ, ವ.59, ಮೊಳಕಾಲ್ಮೂರು 2024.
16. ಮುರುಗ ಮಠ: ಜನಪದ ಕಲಾವಿದ, ವ.49, 2024.